6
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » MYSURU
ಸೋಮವಾರ 20 ಮಾರ್ಚ್ 2023
20 MARCH 2023

## ಎಟಿಎಂಇ ಆತ್ಮೀಯ-2ಕೆ23 | ವಿದ್ಯಾರ್ಥಿಗಳು ಸಾರ್ವಜನಿಕರ ಮ್ಯಾರಥಾನ್

# ಪಾರಮ್ಯ ಮೆರೆದ ಶಶಾಂಕ್, ಸಿಂಧು

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಮೈಸೂರು-ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಆತ್ಮೀಯ-2ಕೆ23 ಅಂಗವಾಗಿ ಭಾನುವಾರ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮ್ಯಾರಥಾನ್ ಸ್ಪರ್ಧೆ ಆಯೋಜಿಸಲಾಗಿತ್ತು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆಯೋಜಿಸಲಾಗಿದ್ದ ಮ್ಯಾರಥಾನ್‌ಗೆ ಮೇಯರ್ ಶಿವಕುಮಾರ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರೊಂದಿಗೆ ಚಾಲನೆ ನೀಡಿದರು. ನಂತರ ಶಿವ ಕುಮಾರ್ ಮಾತನಾಡಿ, ಎಟಿಎಂಇ ಕಾಲೇಜಿನ ಸಾಮಾಜಿಕ ಕಳಕಳಿ ಶ್ಲಾಘನೀಯ ಎಂದರು. ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎನ್. ದೇವರಾಜು, ಕಾರ್ಯದರ್ಶಿ ಕೆ.ಶಿವಶಂಕರ್, ಖಜಾಂಚಿ ಆರ್.ವೀರೇಶ್, ಆಡಳಿತ ಮಂಡಳಿ ಸದಸ್ಯ ಎಚ್.ವೆಂಕಟೇಶ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಪ್ರಾಂಶುಪಾಲ ಡಾ.ಎಲ್. ಬಸವರಾಜ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಡಾ.ಎಲ್ .ಯತೀಶ್ ಇದ್ದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಆರಂಭಗೊಂಡ ಓಟವು ದೊಡ್ಡಗಡಿಯಾರ ವೃತ್ತ, ಸಯ್ಯಾಜಿರಾವ್ ರಸ್ತೆ ತಲುಪಿ ಸಂತೆಪೇಟೆ ತಿರುವು ರಸ್ತೆಯ ಮೂಲಕ ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಜೋಡಿರಸ್ತೆ, ಗನ್‌ಹೌಸ್, ಹಾರ್ಡಿಂಗ್ ವೃತ್ತದ ಮೂಲಕ ಸಾಗಿ ನಂತರ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಮುಕ್ತಾಯಗೊಂಡಿತು.

600 ವಿದ್ಯಾರ್ಥಿಗಳು ಮ್ಯಾರಥಾನ್ ಓಟದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿನಿಯರ ವಿಭಾಗದಲ್ಲಿ ಕ್ರಮವಾಗಿ ಸಿಂಧು (ಇಸಿ ವಿಭಾಗ, ) ತಾನಿಯಾ (ಸಿ.ಎಸ್. ವಿಭಾಗ) ಹಾಗೂ ಚೈತ್ರಾ (ಡೆಟಾಸೈನ್ಸ್ ವಿಭಾಗ) ಮೊದಲ ಮೂರು ಸ್ಥಾನ ಪಡೆದರು. ವಿದ್ಯಾರ್ಥಿಗಳ ವಿಭಾಗದಲ್ಲಿ ಶಶಾಂಕ್ (ಇಇಇ ವಿಭಾಗ), ರೇವಂತ್ (ಎಐಎಂಎಲ್), ಮಿಥಿನ್ ಸಿಂಗ್ (ಸಿ.ಎಸ್. ವಿಭಾಗ) ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು. ಧ್ಯಾಪಕರ ವಿಭಾಗದಲ್ಲಿ ಜಿ.ಎಸ್. ನಂದಿನಿ (ಪ್ರ), ಕೀರ್ತಿ ಕುಂಬಾರ್ ದ್ವಿತೀಯ ಸ್ಥಾನ ಪಡೆದರು. ಸಿಬ್ಬಂದಿ ವಿಭಾಗದಿಂದ ಕೆ.ಮನುಕುಮಾರ್ (ಪ್ರ), ಶಿವಕುಮಾರ (ದ್ವಿ) ಹಾಗೂ ನಾರಾಯಣಸ್ವಾಮಿ (ತೃ) ಸ್ಥಾನ ಪಡೆದರು.



ವಿಜಯವಾಣಿ ಚಿತ್ರ

ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಾರ್ಷಿಕೋತ್ಸವ ಆತ್ಮೀಯ-2ಕೆ23 ಅಂಗವಾಗಿ ಭಾನುವಾರ ಆಯೋಜಿಸಿದ್ದ ಮ್ಯಾರಥಾನ್ ಸ್ಪರ್ಧೆಗೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು. ಎಸ್.ಎನ್.ದೇವರಾಜು, ಕೆ.ಶಿವಶಂಕರ್, ಆರ್.ವೀರೇಶ್, ಎಚ್.ವೆಂಕಟೇಶ್, ಡಾ.ಸಚ್ಚಿದಾನಂದಮೂರ್ತಿ, ಡಾ.ಎಲ್.ಬಸವರಾಜ್, ಡಾ.ಎಲ್.ಯತೀಶ್ ಇದ್ದರು.